**ಎಂ.ವಿ.ಸಿ. 992/2023,          ಪಿ.ಡಬ್ಲೂ-2          ಹೆಸರುಃ ರತ್ನಮ್ಮ**

**ದಿಃ10-06-2026 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲು : 2 ನೇ ಎದುರುದಾರರ ಪರ ಶ್ರೀ ಎಸ್.ವಿ. ವಕೀಲರಿಂದಃ**

ನಾನು ದ್ವಿತೀಯ ಪಿ.ಯು.ಸಿ. ವ್ಯಾಸಂಗ ಮಾಡಿದ್ದೇನೆ. ನನಗೆ ಆಂಗ್ಲ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ. ನಾನು ಸಲ್ಲಿಸಿರುವ ಸಾಕ್ಷ್ಯದ ಪ್ರಮಾಣ ಪತ್ರದಲ್ಲಿನ ವಿಚಾರಗಳ ಕುರಿತು ಗೊತ್ತಿದೆ. ನನ್ನ ಜನ್ಮ ದಿನಾಂಕ 12.08.1970 ಇರುತ್ತದೆ. ಅಪಘಾತದ ಸಮಯದಲ್ಲಿ ನನಗೆ 54 ವರ್ಷ ವಯಸ್ಸಾಗಿತ್ತು. ಅಪಘಾತದ ಸಮಯದಲ್ಲಿ ನಾನು ಮತ್ತು ನನ್ನ ಪತಿ ಪಿಡಬ್ಲೂ.1 ರವರು ನನಗೆ ಸೇರಿದ ಮೋಟಾರ್ ಸೈಕಲ್ ನಂ.ಕೆಎ-16-ಇ.ಎಲ್.-5166 ರಲ್ಲಿ ಹೋಗುತ್ತಿದ್ದೆವು. ನಾನು ಗೃಹಪ್ರವೇಶಕ್ಕೆ ಹೋಗಲು ಮತ್ತಿಗಟ್ಟ ಗ್ರಾಮದ ಮಾರ್ಗವಾಗಿ ತಾಳ್ಯಕ್ಕೆ ಹೋಗುತ್ತಿದ್ದೆವು. ಅಪಘಾತದ ಸಮಯದಲ್ಲಿ ನಾನು ಹೆಲ್ಮೆಟ್‌ನ್ನು ಹಾಕಿರಲಿಲ್ಲ.

2. ನನ್ನ ಪತಿಗೆ ಚಾಲನಾ ಪರವಾನಗಿ ಇತ್ತು. ಸದರಿ ಚಾಲನಾ ಪರವಾನಗಿ ಅಪಘಾತದ ಸಮಯದಲ್ಲಿ ಕಳೆದುಹೋಗಿರುತ್ತದೆ. ಅಪಘಾತದ ನಂತರ ನನ್ನ ಬೈಕು ಸಂಪೂರ್ಣವಾಗಿ ಜಖಂಗೊಂಡಿದ್ದು, ನನ್ನ ಪತಿಗೆ ಸಂಬಂಧಿಸಿದ ಚಾಲನಾ ಪರವಾನಗಿ ಸಿಗಲಿಲ್ಲ. ಅಪಘಾತ ತಾಳ್ಯದ ಕೆರೆ ಬಳಿ ಆಗಿರುತ್ತದೆ.

3. ತಾಳ್ಯ ಕಡೆಯಿಂದ ಎದುರಿನಿಂದ ಮತ್ತೊಂದು ಬೈಕು ಬಂದು ನಮ್ಮ ಬೈಕಿಗೆ ಡಿಕ್ಕಿಪಡಿಸಿತ್ತು. ಎದುರಿನಿಂದ ಬರುತ್ತಿದ್ದ ಬೈಕಿನ ಚಾಲಕ ಮೊಬೈಲ್‌ನಲ್ಲಿ ಮಾತನಾಡಿಕೊಂಡು ಬರುತ್ತಿದ್ದನು. ಸಂಚಾರಿ ನಿಯಮದ ಪ್ರಕಾರ ವಾಹನವನ್ನು ಚಾಲನೆ ಮಾಡುವಾಗ ಮೊಬೈಲ್‌ನ್ನು ಬಳಸುವಂತಿಲ್ಲ ಎಂದರೆ ಸರಿ. ಎದುರಿನಿಂದ ಬರುತ್ತಿದ್ದ ಬೈಕಿನ ಚಾಲಕ ನಿಧಾನವಾಗಿ ಬರುತ್ತಿದ್ದ ಎಂದರೆ ಸಾಕ್ಷಿ ಜೋರಾಗಿ ಬರುತ್ತಿದ್ದ ಎಂದು ಹಾಗೂ ಫೋನಿನಲ್ಲಿ ಮಾತನಾಡಿಕೊಂಡು ಬಂದು ಡಿಕ್ಕಿಪಡಿಸಿದ ಎಂದು ಹೇಳುತ್ತಾರೆ.

4. ಅಪಘಾತದ ಕುರಿತು ಚಿತ್ರಹಳ್ಳಿ ಗೇಟ್ ಪೊಲೀಸ್ ಠಾಣೆಗೆ ನನ್ನ ಪತಿ ದೂರನ್ನು ನೀಡಿರುತ್ತೇನೆ. ಅಪಘಾತ ದಿನಾಂಕ 27.01.2023 ರಂದು ಆಗಿರುತ್ತದೆ ಎಂದರೆ ಸರಿ. ನನ್ನ ಪತಿ ದೂರನ್ನು 17 ದಿನಗಳ ವಿಳಂಬವಾಗಿ ದಿನಾಂಕ 14.02.2023 ರಂದು ನೀಡಿರುತ್ತಾರೆ ಎಂದರೆ ಸರಿ. ನನ್ನ ಪತಿಯ ತಪ್ಪಿನಿಂದ ಅಪಘಾತ ಆಗಿದ್ದು, ಪರಿಹಾರ ಬರುವುದಿಲ್ಲ ಎಂಬ

ಕಾರಣದಿಂದ 1 ನೇ ಎದುರುದಾರರೊಂದಿಗೆ ಷರೀಕಾಗಿ 17 ದಿನಗಳ ವಿಳಂಬವಾಗಿ ದೂರನ್ನು ನೀಡಿದ್ದಾರೆ ಎಂದರೆ ಸರಿಯಲ್ಲ. ತನಿಖಾಧಿಕಾರಿಗಳು ಸಲ್ಲಿಸಿರುವ ದೋಷಾರೋಪಣ ಪಟ್ಟಿಯ ಕುರಿತು ಮಾಹಿತಿ ಇದೆ. ಅಪಘಾತದ ಸಮಯದಲ್ಲಿ 1 ನೇ ಎದುರುದಾರರು ಚಾಲನಾ ಪರವಾನಗಿಯನ್ನು ಹೊಂದಿರಲಿಲ್ಲ ಎಂದು ಆರೋಪಣೆಯನ್ನು ಮಾಡಿರುತ್ತಾರೆ ಎಂದರೆ ಸರಿ. 1 ನೇ ಎದುರುದಾರರು ಚಾಲನಾ ಪರವಾನಗಿ ಹೊಂದಿಲ್ಲದೆ ಚಾಲನೆ ಮಾಡುವಾಗ ಮೊಬೈಲ್‌ನಲ್ಲಿ ಮಾತನಾಡಿಕೊಂಡು ಬಂದು ಡಿಕ್ಕಿಪಡಿಸಿರುವ ಕಾರಣ 1 ನೇ ಎದುರುದಾರರೆ ಪರಿಹಾರವನ್ನು ಪಾವತಿಸಲು ಬಾದ್ಯಸ್ಥರಿದ್ದು, 2 ನೇ ಎದುರುದಾರರು ಯಾವುದೇ ಪರಿಹಾರವನ್ನು ಪಾವತಿಸಲು ಬಾದ್ಯಸ್ಥರಲ್ಲ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

5. ಅಪಘಾತದಲ್ಲಿ ನನ್ನ ಎಡಬುಜ, ಎಡಕಾಲಿಗೆ ಮತ್ತು ಎಡಗೈ ಬೆರಳಿಗೆ ಪೆಟ್ಟಾಗಿತ್ತು. ಅಪಘಾತದ ನಂತರ ನಾನು ಮೊದಲು ಹೆಚ್.ಡಿ.ಪುರದ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದು, ನಂತರ ಚಳ್ಳಕೆರೆಯ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ. ನಂತರ ತುಮಕೂರಿನ ವೆಂಕಟೇಶ್ವರ ಕ್ಲೀನಿಕ್‌ನಲ್ಲಿ ಚಿಕಿತ್ಸೆಯನ್ನು ಪಡೆದಿರುತ್ತೇನೆ. ನನಗೆ ಯಾವುದೇ ಸರ್ಜರಿ ಮಾಡಿಲ್ಲ. ಅಪಘಾತದಲ್ಲಿ ನನಗೆ ಸಣ್ಣ ಪುಟ್ಟ ಗಾಯಗಳಾದ ಕಾರಣ ಸರ್ಜರಿ ಮಾಡಿಲ್ಲ ಎಂದರೆ ಸಾಕ್ಷಿ ನನಗೆ ಅನಾರೋಗ್ಯ ಇದ್ದ ಕಾರಣ ವೈದ್ಯರು ಸರ್ಜರಿ ಬೇಡ ಎಂದು ಹೇಳಿದ್ದರು. ನಾನು ಸಲ್ಲಿಸಿರುವ ಸಾಕ್ಷ್ಯದ ಪ್ರಮಾಣ ಪತ್ರದಲ್ಲಿ ನನಗೆ ಅನಾರೋಗ್ಯ ಇರುವ ಕಾರಣ ಸರ್ಜರಿ ಮಾಡಿಲ್ಲ ಎಂದು ಹೇಳಿಲ್ಲ. ಹೆಚ್ಚಿನ ಪರಿಹಾರವನ್ನು ಪಡೆಯಲು ವೈದ್ಯಕೀಯ ದಾಖಲಾತಿಗಳನ್ನು ಮತ್ತು ಬಿಲ್ಲುಗಳನ್ನು ಸೃಷ್ಟಿಸಿಕೊಂಡು ಬಂದು ಹಾಜರುಪಡಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ